# ಸ್ಕೂಟರ್ ಕಂ ಸೂಟ್‌ಕೇಸ್!



ಇನ್ನು ಮುಂದೆ ನೀವು ನಿಮ್ಮ ಸ್ಕೂಟರ್ ಅನ್ನು ಪಾರ್ಕಿಂಗ್ ಮಾಡಲು ಜಾಗ ಹುಡುಕಬೇಕಾಗಿಲ್ಲ ಅಥವಾ ಎಲ್ಲೋ ಪಾರ್ಕ್ ಮಾಡಿ ಇನ್ನೆಲ್ಲೋ ದೂರದಲ್ಲಿರುವ ಆಫೀಸ್‌ಗೆ ನಡೆದು ಹೋಗಬೇಕಾಗಿಲ್ಲ. ಹೊರಗೆ ನಿಲ್ಲಿಸಿದರೆ ನಿಮ್ಮ ಗಾಡಿಯನ್ನು ಯಾರಾದರೂ ಕದ್ದು ಬಿಟ್ಟಾರೆಂಬ ಭಯ ಕಿಂಚಿತ್ತೂ ಬೇಡವೇ ಬೇಡ. ಯಾಕೆಂದರೆ ಹಂಗೆರಿ ದೇಶದಲ್ಲಿನ ಆಂಟ್ರೋ ಗ್ರೂಪ್ ಎನ್ನುವ ಲಾಭಾಕಾಂಕ್ಷಿಯಲ್ಲದ ಸಂಸ್ಥೆಯೊಂದು ಸುಲಭವಾಗಿ ಮಡಿಚಿಟ್ಟುಕೊಂಡು ಜೊತೆಯಲ್ಲಿಯೇ ಕೊಂಡೊಯ್ಯಬಹುದಾದ ಸ್ಕೂಟರ್ ಅನ್ನು ಹೊರ ತಂದಿದೆ.

ಮೂವೋ ಎಂಬ ಹೆಸರಿನ ಅಷ್ಟೇನೂ ಭಾರವಿರದ ಈ ಎಲೆಕ್ಟ್ರಿಕ್ ಸ್ಕೂಟರ್, ಅಪ್ಪಟ ಪರಿಸರ ಸ್ನೇಹಿಯಾಗಿದ್ದು ಗಾಲಿಗಳಿರುವ ಸೂಟ್‌ಕೇಸ್‌ನಂತೆ ಇದನ್ನು ನೀವು ನಿಮ್ಮ ಜೊತೆಯೇ ತೆಗೆದುಕೊಂಡು ಹೋಗಬಹುದು. ಸುಮಾರು 25 ಕೆ.ಜಿ (55 ಪೌಂಡ್) ಭಾರವಿರುವ ಎರಡು ಗಾಲಿಗಳುಳ್ಳ ಈ ಸ್ಕೂಟರ್, ಒರಗಿ ಕುಳಿತುಕೊಳ್ಳಬಹುದಾದ ಸೀಟ್ ಅನ್ನು ಹೊಂದಿದೆ. ಒಮ್ಮೆ ಬ್ಯಾಟರಿ ಚಾರ್ಜ್ ಮಾಡಿದರೆ ಸುಮಾರು 35 ಕಿಮೀ ಚಲಿಸುವ ಇದರ ಗರಿಷ್ಠ ವೇಗ 45 ಕಿಮೀ. ಇದರ ಕಾಂಪೋಜಿಟ್ ಕಾರ್ಬನ್ ಬಾಡಿಯು ಎರಡು ಭಾಗವಿದ್ದು, ಮಡಚಲು ಅಥವಾ ಬಿಚ್ಚಲು ತಗಲುವ ಸಮಯ ಕೇವಲ ಎರಡು ನಿಮಿಷಗಳು ಮಾತ್ರ.



ಮೂವೋ ದ ಪ್ರಾಜೆಕ್ಟ್ 2008 ರಲ್ಲಿಯೇ ಪ್ರಾರಂಭಗೊಂಡಿದ್ದರೂ 5 ವರ್ಷಗಳ ಬಳಿಕ ಮಾದರಿ ಸ್ಕೂಟರ್ ಅನ್ನು ಹೊರ ತರಲಾಗಿದೆ. ಸದ್ಯದಲ್ಲಿ ಆಂಟ್ರೋ ಗ್ರೂಪ್ ಈ ಮೂವೋ ಅನ್ನು ಮಾರುಕಟ್ಟೆಗೆ ತರಲು ಕೆಲವು ಕಂಪೆನಿಗಳ ಜೊತೆ ಮಾತುಕತೆ ನಡೆಸುತ್ತಿದೆ. ಸಾಕಷ್ಟು ಬಂಡವಾಳ ಸಿಕ್ಕಿದರೆ ವರ್ಷಕ್ಕೆ 15,000 ಸ್ಕೂಟರ್‌ಗಳನ್ನು ಉತ್ಪಾದನೆ ಮಾಡುವ ಅಥವಾ ಕಡಿಮೆ ದೊರಕಿದರೆ ವರ್ಷಕ್ಕೆ 4000 ಸ್ಕೂಟರ್‌ಗಳನ್ನು ಮಾತ್ರ ಉತ್ಪಾದನೆ ಮಾಡುವ ಇರಾದೆ ಸಂಸ್ಥೆಯದ್ದು. ಆಗ ಮೂವೋದ ಬೆಲೆ ಸುಮಾರು 1,67,600 ರೂಗಳು ಅಥವಾ 2,48,700 ರೂಪಾಯಿಗಳಷ್ಟಾಗುತ್ತದೆ ಎಂದು ಕಂಪೆನಿಯ ಸಿ.ಇ.ಓ ಥಾಮಸ್ ಸ್ಲೇಜಾಕ್ ರ ಅಭಿಪ್ರಾಯ.

■ ವಿದ್ಯಾ ವಿ. ಹಾಲಭಾವಿ

